# ಸುದ್ದಿಸಂಚಯ

## "ಸ್ವಾಮಿ ವಿವೇಕಾನಂದರ ಚಿಂತನೆಗಳು ಮತ್ತು ವಿವಿಧ ಜ್ಞಾನಶಾಖೆಗಳು"
## —ರಾಷ್ಟ್ರೀಯ ವಿಚಾರ ಸಂಕಿರಣ



ಸ್ವಾಮಿ ನಿತ್ಯಸ್ಥಾನಂದಜಿ ಅವರು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟನೆ ಮಾಡುತ್ತಿರುವುದು. ಎಡದಿಂದ, ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಪ್ರೊ.ಜೆ. ಶಶಿಧರ ಪ್ರಸಾದ್

ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ಅಧ್ಯಯನ ವಿಭಾಗದ ಸ್ವಾಮಿ ವಿವೇಕಾನಂದ ಪೀಠದ ವತಿಯಿಂದ "**ಸ್ವಾಮಿ ವಿವೇಕಾನಂದರ ಚಿಂತನೆಗಳು ಮತ್ತು ವಿವಿಧ ಜ್ಞಾನಶಾಖೆಗಳು**" ಎಂಬ ವಿಷಯವನ್ನು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ವೊಂದನ್ನು ಜುಲೈ ೩ ಮತ್ತು ೪ರಂದು ಮಾನಸಗಂಗೋತ್ರಿಯಲ್ಲಿ ಏರ್ಪಡಿಸಲಾಗಿತ್ತು. ಸ್ವಾಮಿ ವಿವೇಕಾನಂದರ ಜೀವನ–ಪ್ರತಿಭೆ–ಚಿಂತನೆಗಳಿಗೆ ಹಲವು ಮುಖಗಳು. ವಿವಿಧ ಜ್ಞಾನಶಾಖೆಗಳ ನಿಟ್ಟಿನಿಂದ ಅವನ್ನು ಪರಿಶೀಲಿಸುವ ಪ್ರಯತ್ನವೇ ಈ ವಿಚಾರ ಸಂಕಿರಣ. ಈ ವಿಚಾರ ಸಂಕಿರಣದ ಉದ್ಘಾಟನೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಜೆ. ಶಶಿಧರ ಪ್ರಸಾದ್ ಅವರು ನೆರವೇರಿಸಿದರು. ಸ್ವಾಮಿಜಿಯವರ ವಿಚಾರಧಾರೆಯ ಪ್ರಸ್ತುತತೆಯನ್ನು ಗುರುತಿಸಿದ ಅವರು ಸಮಕಾಲೀನ ವಿದ್ಯಮಾನಗಳ ಹಿನ್ನೆಲೆಯಲ್ಲಿ ಸ್ವಾಮಿಜಿಯವರು ಏಕೆ ನಮಗೆ ಮುಖ್ಯರಾಗುತ್ತಾರೆ ಎಂಬುದನ್ನು ತಿಳಿಸಿದರು. ಆಶಯ ಭಾಷಣ ಮಾಡಿದ ಪೀಠದ ಸಂದರ್ಶಕ ಪ್ರಾಧ್ಯಾಪಕ ಡಾ.ಎಚ್.ಎನ್.ಮುರಳೀಧರ ಅವರು ವಿಚಾರ ಸಂಕಿರಣದ ಉದ್ದೇಶವನ್ನು ವಿವರಿಸಿದರು. ಮುಖ್ಯ ಅತಿಥಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು "ವಿವೇಕಾನಂದರ ಜ್ಞಾನ ಮತ್ತು ಸಮನ್ವಯಗಳ ಬೆಳಕಿನಲ್ಲಿ ಸಾಗುವುದರ ಮೂಲಕ ವಿಚ್ಛಿದ್ರಕಾರಿ ಸನ್ನಿವೇಶದಿಂದ ಮುಕ್ತಗೊಂಡು ಮನುಷ್ಯರಾಗಲು ಸಾಧ್ಯ, ಜ್ಞಾನಶಾಖೆಗಳ ಗುರಿಯೂ ಇದೇ ಆಗಬೇಕು" ಎಂದು ಅಭಿಪ್ರಾಯಪಟ್ಟರು. ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮತ್ ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್ ಅವರು, ಎಲ್ಲವನ್ನೂ, ಎಲ್ಲರನ್ನೂ ಒಳಗೊಳ್ಳುವ ಸ್ವಾಮಿ ವಿವೇಕಾನಂದರ ಸಂದೇಶದ ವೈಶಾಲ್ಯವನ್ನು ಗುರುತಿಸಿದರು.

ಬಳಿಕ ನಾಲ್ಕು ಗೋಷ್ಠಿಗಳಲ್ಲಿ ವಿಚಾರ ಸಂಕಿರಣ ನಡೆಯಿತು. ಭಾರತೀಯ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ಡಾ. ಎಸ್. ವೆಂಕಟೇಶ್, ಪಾಶ್ಚಾತ್ಯ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ಡಾ. ಎಚ್.ಎಲ್. ಚಂದ್ರಶೇಖರ್, ಇತಿಹಾಸದ ಹಿನ್ನೆಲೆಯಲ್ಲಿ ಪ್ರೊ. ಎ.ವಿ ನರಸಿಂಹಮೂರ್ತಿ, ವಿಜ್ಞಾನದ ಹಿನ್ನೆಲೆಯಲ್ಲಿ ಪ್ರೊ. ಜಿ.ಟಿ. ನಾರಾಯಣ ರಾವ್, ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಡಾ. ಆರ್. ಇಂದಿರಾ, ಅರ್ಥಶಾಸ್ತ್ರದ ಹಿನ್ನೆಲಯಲ್ಲಿ ಡಾ. ಸಿ.ಕೆ. ರೇಣುಕಾರ್ಯ, ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿ ಪ್ರೊ. ಎಸ್. ದಂಡಪಾಣಿ, ಶಿಕ್ಷಣ ಶಾಸ್ತ್ರದ ಹಿನ್ನೆಲೆಯಲ್ಲಿ ಡಾ. ಗುರುರಾಜ ಕರಜಗಿ ವಿಚಾರಗಳನ್ನು ಮಂಡಿಸಿದರು. ಡಾ. ವಿ. ಎನ್. ಶೇಷಗಿರಿರಾವ್, ಡಾ. ಎಂ. ರಾಮಚಂದ್ರ, ಶ್ರೀಮತ್ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಶ್ರೀಮತ್ ಸ್ವಾಮಿ ಜಿತಕಾಮಾನಂದಜಿ ಮಹಾರಾಜ್ ಅವರು ಅನುಕ್ರಮವಾಗಿ ಈ ನಾಲ್ಕು ಗೋಷ್ಠಿಗಳ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಮಾರೋಪ ಭಾಷಣ ಮಾಡಿದ ಶ್ರೀಮತ್ ಸ್ವಾಮಿ ಆತ್ಮಜ್ಞಾನಂದಜಿ ಮಹಾರಾಜ್ ಅವರು, ಹೇಗೆ ಸ್ವಾಮಿ ವಿವೇಕಾನಂದರು ವಿವಿಧ ವಲಯಗಳ ಚಿಂತಕರನ್ನು ಪ್ರಭಾವಿಸಿದ್ದಾರೆ ಎಂಬುದನ್ನು ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಕಡಪದಲ್ಲಿರುವ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಆತ್ಮವಿದಾನಂದಜಿ ಮಹಾರಾಜ್ ಅವರು ಇಂತಹ ವಿಚಾರ ಸಂಕಿರಣಗಳ ಮೂಲಕ ಸ್ವಾಮಿಜಿಯವರ ಚಿಂತನೆಗಳ ಬಹುಮುಖತೆಯನ್ನು ಅರಿಯುವುದರ ಅಗತ್ಯವನ್ನು ಒತ್ತಿಹೇಳಿ, ಪೀಠದ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದರು. ಸ್ವಾಮಿ ವಿವೇಕಾನಂದರ ಅಭಿಮಾನಿಗಳು, ಚಿಂತಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಂಕಿರಣದ ಯಶಸ್ಸಿಗೆ ಕಾರಣರಾದರು. ✪

*Managing Editor: Swami Nityasthananda* *Editor: Swami Atmajnananda*
*Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.*